# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ : 546(551)
2) ಸದಸ್ಯರ ಹೆಸರು : ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3) ಉತ್ತರಿಸುವ ದಿನಾಂಕ: : 24/09/2020
4) ಉತ್ತರಿಸುವ ಸಚಿವರ ಹೆಸರು : ಮಾನ್ಯ ಮುಖ್ಯ ಮಂತ್ರಿಗಳು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬರಬೇಕಾಗಿರುವ ಜಿ.ಎಸ್.ಟಿ. ಪರಿಹಾರದ ಮೊತ್ತವೆಷ್ಟು; | ರೂ.13764.31 ಕೋಟಿಗಳು (ಜುಲೈ ಅಂತ್ಯದವರೆಗೆ) |
| ಆ) | ಸರಕು ಮತ್ತು ಸೇವಾ ತೆರಿಗೆ (ಜಿ.ಎಸ್.ಟಿ.) ನಷ್ಟ ಪರಿಹಾರದ ಅಲಭ್ಯತೆಯಿಂದಾಗಿ ಉಂಟಾಗಿರುವ ಆದಾಯ ಕೊರತೆ ಎಷ್ಟು; | ರೂ.13764.31 ಕೋಟಿಗಳು (ಜುಲೈ ಅಂತ್ಯದವರೆಗೆ) |
| ಇ) | ಜಿ.ಎಸ್.ಟಿ. ಸೆಸ್ ಹಾಗೂ ವಿಶೇಷ ರೂಪದ ಸಾಲ ಪಡೆಯುವ ಬಗ್ಗೆ ಸರ್ಕಾರ ಯಾವ ವಿಧಾನವನ್ನು ಆಯ್ಕೆ ಮಾಡಿಕೊಂಡಿದೆ; ಇದರಲ್ಲಿ ಎಷ್ಟು ಸಾಲ ಪಡೆಯುವ ಉದ್ದೇಶ ಹೊಂದಿದೆ; ಇದಕ್ಕೆ ಪಾವತಿಸಬೇಕಾದ ಬಡ್ಡಿದರ ಎಷ್ಟು ಇದನ್ನು ಸರ್ಕಾರ ಯಾವ ಉದ್ದೇಶಕ್ಕೆ ಬಳಸಿಕೊಳ್ಳಲು ತೀರ್ಮಾನಿಸಲಾಗಿದೆ; ಹಾಗೂ ಇದರಿಂದಾಗುವ ಅನುಕೂಲಗಳೇನು; | ಜಿ.ಎಸ್.ಟಿ. ನಷ್ಟ ಪರಿಹಾರ ಪಡೆಯುವ ಬಗ್ಗೆ ಕೇಂದ್ರ ಸರ್ಕಾರವು ಎರಡು ಆಯ್ಕೆಗಳನ್ನು ನೀಡಿದ್ದು, ಇದರಲ್ಲಿ ರಾಜ್ಯ ಸರ್ಕಾರವು ಆಯ್ಕೆ-1ನ್ನು ಆಯ್ಕೆ ಮಾಡಿಕೊಂಡಿದ್ದು, ಇದರಲ್ಲಿ ರೂ.11,324 ಕೋಟಿ ಸಾಲ ಪಡೆಯಬಹುದಾಗಿದೆ. ಬಡ್ಡಿ ದರವು ಸಾಲ ಪಡೆದ ಸಮಯದಲ್ಲಿ ನಿರ್ಧಾರವಾಗುತ್ತದೆ. ಈ ಸಾಲದ ಮೊತ್ತವನ್ನು ರಾಜ್ಯದ ವಿವಿಧ ಅಭಿವೃದ್ಧಿ ಕಾರ್ಯಕ್ಕೆ ಉಪಯೋಗಿಸಿಕೊಳ್ಳಲಾಗುವುದು. |
| ಈ) | ಸಾಲ ಪಡೆದಲ್ಲಿ, ಈ ಸಾಲದ ಮೇಲಿನ ಬಡ್ಡಿಯನ್ನು ಸರ್ಕಾರ ಯಾವ ಸಂಪನ್ಮೂಲದಿಂದ ಪಾವತಿಸಬೇಕಾಗುತ್ತದೆ (ವಿವರ ನೀಡುವುದು): | ಜಿ.ಎಸ್.ಟಿ. ನಷ್ಟ ಪರಿಹಾರದ ಬದಲು ಪಡೆದ ಸಾಲದ ಮೇಲಿನ ಬಡ್ಡಿಯನ್ನು ಕೇಂದ್ರ ಸರ್ಕಾರವೇ ಪಾವತಿ ಮಾಡುತ್ತದೆ. |
| ಉ) | ರಾಜ್ಯ ಸರ್ಕಾರದ ಋಣಭಾರ ಎಷ್ಟು ಲಕ್ಷ ಕೋಟಿಗೆ ಏರಿಕೆಯಾಗಿದೆ ಹಾಗೂ ಈಗ ಹಾಲಿ ಇರುವ ಋಣಭಾರ ಎಷ್ಟು? | ರೂ.11,324 ಕೋಟಿ ಕೇಂದ್ರ ಸರ್ಕಾರವು ಅಸಲು ಮತ್ತು ಬಡ್ಡಿಯನ್ನು ಮರುಪಾವತಿ ಮಾಡುತ್ತಿದ್ದು, ಇದರಿಂದ ರಾಜ್ಯಕ್ಕೆ ಋಣಭಾರವಿರುವುದಿಲ್ಲ. ಮಹಾಲೇಖಪಾಲರ ಪೂರ್ವ ವಾಸ್ತವಿಕ ಲೆಕ್ಕದ ಅನುಸಾರ ಮಾರ್ಚ್-2020ರ ಅಂತ್ಯಕ್ಕೆ ರಾಜ್ಯ ಸರ್ಕಾರದ ಮೇಲೆ ಇರುವ ಬಾಕಿ ಸಾಲದ ಮೊತ್ತ ರೂ.2,34,245.42 ಕೋಟಿಗಳು. |

ಸಂಖ್ಯೆ: ಆಇ 57 ಸಿಎಸ್‌ಎಲ್ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್. ಯಡಿಯೂರಪ್ಪ)
ಮುಖ್ಯ ಮಂತ್ರಿ.